ಸಾಕ್ಷಿಯನ್ನು ದಿಃ 27.09.2019 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಕೆಎಪಿ ವಕೀಲರಿಂದಃ-

ನಾನು 1983 ನೇ ಇಸವಿಯಲ್ಲಿ ಸದರಿ ಬ್ಯಾಂಕ್‌ನಲ್ಲಿ ಕೆಲಸಕ್ಕೆ ಸೇರಿದ್ದೇನೆಂದರೆ ಸರಿ. ನಾನು 1983 ರಿಂದ 1986 ವರೆಗೆ ಎನ್.ಆರ್. ರೋಡ್ ಶಾಖೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ. ನಾನು ಸದರಿ ಬ್ಯಾಂಕ್‌ನ ವಿವಿಧ ಶಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ವರ್ಗಾವಣೆಯಾಗಿ ಕೆಲಸ ನಿರ್ವಹಿಸಿದ್ದೇನೆ. ಆದರೆ ವರ್ಗಾವಣೆಗೆ ಸಂಬಂಧಪಟ್ಟಂತೆ ಬರವಣಿಗೆ ಆದೇಶವಿರುತ್ತದೆ. ಜನರಲ್ ಮ್ಯಾನೇಜರ್‌ರವರು ವರ್ಗಾವಣೆಯ ಆದೇಶವನ್ನು ನೀಡುತ್ತಾರೆ. 1992 ರಿಂದ 1995 ವರೆಗೆ ಕೇಂದ್ರ ಕಚೇರಿಯಲ್ಲಿ ನಾನು ಕ್ರೆಡಿಟ್ ಇನ್ಸ್‌ಪೆಕ್ಷನ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. 1995 ರಿಂದ ಅಸಿಸ್ಟೆಂಟ್ ಅಕೌಂಟೆಂಟ್ ಆಗಿ ಬ್ರಿಗೇಡ್ ರೋಡ್ ಶಾಖೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ. ನಾನು ಸದರಿ ಸಮಯದಲ್ಲಿ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದೆ. ನಾನು ಸದರಿ ಶಾಖೆಯ ಮ್ಯಾನೇಜರ್‌ರವರ ಅನುಪಮ ಸ್ಥಿತಿಯಲ್ಲಿ ನಾನು ಅವರ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆ. 2002 ರಿಂದ 2010 ವರೆಗೆ ಪುನಃ ನಾನು ಶಿವಾಜಿನಗರ ಶಾಖೆಯಲ್ಲಿ ಅಕೌಂಟೆಂಟ್ ಕಮ್ ಸೂಪರ್‌ವಿಶನ್ ಅಂಡ್ ಕಂಟ್ರೋಲ್ ಆಗಿ ಕೆಲಸ ನಿರ್ವಹಿಸಿದ್ದೇನೆ. ಪ್ರತಿ ವರ್ಷ ಆರ್‌ಬಿಐರವರ ಲೆಕ್ಕಪರಿಶೋಧನೆ ನಮ್ಮ ಬ್ಯಾಂಕ್‌ನಲ್ಲಿ ನಡೆಯುತ್ತಿತ್ತು ಎಂದರೆ ಸರಿ. ನಮ್ಮ ಬ್ಯಾಂಕ್‌ನ ಇಂಟರ್ನಲ್ ಆಡಿಟ್ ಆದ ನಂತರ ಸದರಿ ವರದಿಯ ಅನುಮೋದನೆಗಾಗಿ ಜನರಲ್ ಬಾಡಿ ಮೀಟಿಂಗ್‌ನ್ನು ಇಟ್ಟು ಬೋರ್ಡ್ ಆಫ್ ಡೈರೆಕ್ಟರ್ಸ್‌ರವರ ಅನುಮೋದನೆ ಪಡೆದು ನಂತರ ಸದರಿ ವರದಿಯನ್ನು ಆರ್‌ಬಿಐ ಲೆಕ್ಕಪರಿಶೋಧನೆಗೆ ಒಳಪಡಿಸುತ್ತೇವೆಂದರೆ ಸರಿ. ನಮ್ಮ

ಬ್ಯಾಂಕ್‌ನ 15 ಶಾಖೆಗಳಿಗೆ ಸಂಬಂಧಪಟ್ಟ ಸಾಲದ ಅರ್ಜಿಗಳನ್ನು ನಮ್ಮ ಕೇಂದ್ರ ಕಚೇರಿಯು ಗಣನೆಗೆ ತೆಗೆದುಕೊಳ್ಳುತ್ತದೆ ಎಂದರೆ ಸರಿ. ಸದರಿ ಸಾಲದ ಅರ್ಜಿಗಳಿಗೆ ಸಂಬಂಧ ಯಾವುದೇ ನ್ಯೂನತೆಗಳು ಕಂಡು ಬಂದರೆ ಕ್ರೆಡಿಟ್ಸ್ ಮ್ಯಾನೇಜರ್‌ರವರು ಪರಿಶೀಲನೆ ಮಾಡುತ್ತಾರೆ. ನಾನು ಸದರಿ ನ್ಯೂನತೆಗಳು ಕಂಡುಬಂದಾಗ ಈ ಬಗ್ಗೆ ನಾನು ಮೇಲಿನ ಅಧಿಕಾರಿಗೆ ವರದಿ ಸಲ್ಲಿಸಿರುತ್ತೇನೆ. ಸದರಿ ವರದಿಯ ಆಧಾರದ ಮೇಲೆ ಮೇಲಿನ ಅಧಿಕಾರಿಗಳು ಪುನಃ ವರದಿ ಮಾಡಿರುತ್ತಾರೆ. ಯಾವುದೇ ನ್ಯೂನತೆಗಳು ಕಂಡು ಬಂದಲ್ಲಿ ಸದರಿ ನ್ಯೂನತೆಗಳು ಆರ್‌ಬಿಐ ಲೆಕ್ಕಪರಿಶೋಧನೆಯಲ್ಲಿ ಕಂಡುಬರುತ್ತವೆ ಎಂದರೆ ಸರಿ. ನಾನು ಬ್ರಿಗೇಡ್ ರೋಡ್ ಶಾಖೆಯಲ್ಲಿ ಆಗಸ್ಟ್ 2002 ವರೆಗೆ ಕೆಲಲಸ ನಿರ್ವಹಿಸಿದ್ದು, ಸೆಪ್ಟೆಂಬರ್ 2002 ರಿಂದ 2010 ವರೆಗೆ ಶಿವಾಜಿನಗರ ಬ್ಯಾಂಕ್ ಶಾಖೆಯಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ನಾನು ಬ್ರಿಗೇಡ್ ರೋಡ್ ಶಾಖೆಯಲ್ಲಿ ಕೆಲಸ ನಿರ್ವಹಿಸುವ ಸಮಯದಲ್ಲಿ ಅನ್ಸಾರಿರವರು ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಬ್ರಿಗೇಡ್ ರೋಡ್ ಶಾಖೆಯಿಂದ ಎನ್.ಆರ್.ರೋಡ್ ಶಾಖೆಗೆ ಹೋಗುವಂತೆ ಮೌಖಿಕ ವರ್ಗಾವಣೆ ಆದೇಶವಾಗಿರುತ್ತದೆ. ಒಂದು ಶಾಖೆಯಿಂದ ಇನ್ನೊಂದು ಶಾಖೆಗೆ ವರ್ಗಾವಣೆಯಾದರೆ ಈ ಬಗ್ಗೆ ಬರವಣಿಗೆ ಮೂಲಕ ಆದೇಶ ಬೇಕು ಎಂದರೆ ಸರಿಯಲ್ಲ.

ಪ್ರಶ್ನೆ:- ನೀವು ಬ್ರಿಗೇಡ್ ರೋಡ್ ಬ್ರ್ಯಾಂಚ್‌ನಿಂದ ಎನ್.ಆರ್.ರೋಡ್ ಬ್ರ್ಯಾಂಚ್‌ಗೆ ಹೋದಾಗ ಪಕ್ಕದ ಬ್ರ್ಯಾಂಚ್ ಅಥವಾ ಬೇರೆ ಮ್ಯಾನೇಜರ್‌ರವರಿಗೆ ವಿಷಯ ತಿಳಿಸದೇ ಹೋಗಿರುತ್ತೀರಾ?

ಉ:- ಆ ಸಮಯದಲ್ಲಿ ನಾನು ಸದರಿ ಶಾಖೆಯ ಇಂಚಾರ್ಜ್ ಮ್ಯಾನೇಜರ್ ಆಗಿದ್ದೆ.

ಸಾಕ್ಷಿಯು ಮುಂದುವರೆದು ನುಡಿಯುವುದೇನೆಂದರೆ ಕಚೇರಿಯ ವೇಳೆ ಮುಗಿದ ನಂತರ ನಾನು ಎನ್.ಆರ್.ರೋಡ್ ಬ್ರ್ಯಾಂಚ್‌ಗೆ ಹೋಗಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ಮೇಲೆ ತಿಳಿಸಿದ ವೇಳೆಯ ಬಗ್ಗೆ ತಿಳಿಸಿದ್ದೇನೋ ಇಲ್ಲವೋ ಜ್ಞಾಪಕ ಇಲ್ಲ. ಆ ರೀತಿ ನಾನು ಫೆಬ್ರವರಿ ತಿಂಗಳಲ್ಲಿ ಹೋಗಿರುತ್ತೇನೆ. ಆದರೆ ದಿನ ನನಗೆ ಜ್ಞಾಪಕ ಇಲ್ಲ. ಈ ರೀತಿ ನಾನು ಎನ್.ರೋಡ್‌ಗೆ ಹೋಗಿರುವ ವಿಷಯ ನಮ್ಮ ಮೇಲಿನ ಅಧಿಕಾರಿಗೆ ಮಾರನೇ ದಿನ ಗೊತ್ತಾಯಿತು.

(ಕೋರಿಕೆಯ ಮೇರೆಗೆ ಮುಂದಿನ ಪಾಟಿ ಸವಾಲಿಗೆಂದು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ